

◆ **ಸಾಮಾನ್ಯವಾಗಿ ನಿವೃತ್ತಿಯ ನಂತರ ಯಾರನ್ನಾದರೂ ಕೇಳಿದಾಗ ಅನೇಕರು, 'ಇದನ್ನು ಬಯಸಿರಲಿಲ್ಲ' ಎನ್ನುವ ಮಾತಿನಿಂದಲೇ ಅವರ ಬದುಕಿನ ಹಿನ್ನೋಟವನ್ನು ಆರಂಭಿಸುತ್ತಾರೆ. ನಿಮ್ಮ ವಿಷಯದಲ್ಲಿ ಇದು...**

ಒಂದು ರೀತೀಲಿ ಹೌದು ಅನ್ನಬೇಕು. ಯಾಕಂದ್ರೆ ನಾನು ಕನ್ನಡ ಆನರ್ಸ್ ಓದಿ, ನಂತರ ಕನ್ನಡ ಎಂ.ಎ ಮಾಡಿದವನು. ಅಂದರೆ ಅಧ್ಯಾಪನ, ಸಂಶೋಧನೆ ಇವೇ ಸಹಜವಾಗಿ ನನ್ನ ವೃತ್ತಿಯೂ ಆಗಬೇಕಾಗಿತ್ತು. ಸಾಮಾನ್ಯವಾಗಿ ಪದವಿ ಶಿಕ್ಷಣದಲ್ಲಿ ಮೂರು ವಿಷಯಗಳನ್ನು ಕಲೀಬೇಕು. ಅವುಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ಇರುತ್ತೆ. ಆನರ್ಸ್ ಅಂತಾದಾಗ ಕನ್ನಡವೇ ಶುರು ಮತ್ತು ಕೊನೆ. ಆದರೆ ಹಾಗಾಗದೇ ನಾನು ಆಕಾಶವಾಣಿ ಮತ್ತು ಸಾಹಿತ್ಯ ಅಕಾಡೆಮಿಯಲ್ಲಿ ಕೆಲಸ ಮಾಡಿದೆ. ಇದರ ಬಗ್ಗೆ ನನಗೆ ಖಂಡಿತಾ ರಿಗ್ರೆಟ್ಸ್ ಇಲ್ಲ. ಈ ಎರಡೂ ಸಂಸ್ಥೆಗಳಲ್ಲಿ ಸಾಹಿತ್ಯ ಮತ್ತು ಅದಕ್ಕೆ ಪೂರಕ ಅನ್ನಬಹುದಾದ ಕೆಲಸಗಳನ್ನೇ ಮಾಡಿದೆ.



◆ **ಶಾಸ್ತ್ರೀಯ ಭಾಷೆಯಾಗಿ ಕನ್ನಡವನ್ನು ಘೋಷಿಸುವುದರಲ್ಲಿ ನಿಮ್ಮದು ನಿರ್ಣಾಯಕ ಪಾತ್ರವಾಗಿತ್ತು. ಅದರ ಬಗ್ಗೆ ಸ್ವಲ್ಪ ಹೇಳಿ.**

ಕೇಂದ್ರದ ಗೃಹ ಮಂತ್ರಾಲಯದ ಅಡಿಯಲ್ಲಿ ಈ ವಿಷಯ ಬರುತ್ತೆ. ತಜ್ಞರ ಸಮಿತಿ ರಚಿಸಿ, ಅದರ ಸಭೆಗಳನ್ನು ನಡೆಸಿ, ವರದಿಗಳನ್ನು ಶಿಫಾರಸುಗಳನ್ನು ಸರ್ಕಾರಕ್ಕೆ ಸಲ್ಲಿಸುವ ಜವಾಬ್ದಾರಿಯನ್ನು ಸಾಹಿತ್ಯ ಅಕಾಡೆಮಿಗೆ ವಹಿಸಲಾಗಿದೆ. ನಾನು ಅಕಾಡೆಮಿಯ ಕಾರ್ಯದರ್ಶಿಯಾಗಿ ಹೋಗುವಷ್ಟರಲ್ಲಿ ತಮಿಳು ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಕೊಟ್ಟು ಆಗಿತ್ತು. ಅದಾದ ನಂತರ ಯಾವ ಸಭೆಗಳೂ ನಡೆಯದೆ ಸಂಬಂಧಪಟ್ಟ ಕಡತಗಳು ಕೋಲ್ಡ್ ಸ್ಟೋರೇಜ್‌ನಲ್ಲಿದ್ದವು. ಆ ಕಾರಣಗಳನ್ನು ಇಲ್ಲಿ ಹೇಳುವ ಅಗತ್ಯವಿಲ್ಲ. ನಾನು ಆಗ ಸಭೆಗಳನ್ನು ನಡೆಸಲು ನಮ್ಮ ಅಧ್ಯಕ್ಷರ ಮತ್ತು ಸರ್ಕಾರದ ಅನುಮತಿ ಪಡೆದು ಪ್ರಾರಂಭಿಸಿದೆ. ಹಲವು ಸಭೆಗಳ ನಂತರ ಕನ್ನಡ ಮತ್ತು ತೆಲುಗು ಭಾಷೆಗಳಿಗೆ ಶಾಸ್ತ್ರೀಯ ಸ್ಥಾನಮಾನ ನೀಡುವ ಸಭೆಯ ಶಿಫಾರಸುಗಳನ್ನು ವರದಿಗಳನ್ನಾಗಿ, ಸದಸ್ಯ ಕಾರ್ಯದರ್ಶಿಯಾಗಿ ಸರ್ಕಾರಕ್ಕೆ ಸಲ್ಲಿಸಿದೆ. ಮುಂದಿನದ್ದು ಎಲ್ಲರಿಗೂ ತಿಳಿದದ್ದೇ. ಶಾಸ್ತ್ರೀಯ ಸ್ಥಾನಮಾನ ಕೊಡಬಾರದೆಂದು ತಮಿಳಿನ ಒಬ್ಬಿಬ್ಬರು ಕೋರ್ಟ್ ಮೆಟ್ಟಲು ಹತ್ತಿದ ಸಂದರ್ಭದಲ್ಲಿ ನಾನು ದಿಲ್ಲಿಯಿಂದ ಚೆನ್ನೈಗೆ ಬಂದು ಸರ್ಕಾರದ ಪರವಾಗಿ ವಕಾಲತ್ತುನಾಮಕ್ಕೆ ಸಹಿ ಮಾಡಿ ಕೇಸ್ ದಾಖಲಿಸಿದ್ದೆ. ಅದು ಸಂತೋಷವನ್ನು ಕೊಡುತ್ತದೆ. ಶಾಸ್ತ್ರೀಯ ಸ್ಥಾನಮಾನ ಕುರಿತಂತೆ ವೈಯಕ್ತಿಕವಾಗಿ ನನಗೆ ಭಿನ್ನ